ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/ಹೆಚ್.ಆರ್.ಎಂ.ಎಸ್/ಇತರೇ/03/2023

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 17/01/2023

**ಸುತ್ತೋಲೆ**

**ವಿಷಯ:** ಸಾರ್ವತ್ರಿಕ ಚುನಾವಣೆಗಳು – 2023ರ ಸಂಬಂಧ ಮತದಾನ ಸಿಬ್ಬಂದಿಗಳ ಡಾಟಾಬೇಸ್ ಅನ್ನು NIC ಗೆ ಒದಗಿಸುವ ಬಗ್ಗೆ

**ಉಲ್ಲೇಖ:** ಮಾನ್ಯ ಚುನಾವಣಾಧಿಕಾರಿಗಳ ಕಛೇರಿ, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಆಸುಇ/251/ಚುಸಿಆ/2022 ದಿನಾಂಕ: 11/01/2023

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಪ್ರಯುಕ್ತ, ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಕಛೇರಿ / ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಿಬ್ಬಂದಿಗಳ ಮಾಹಿತಿಯನ್ನು ಜಿಲ್ಲಾವಾರು / ತಾಲ್ಲೂಕುವಾರು ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸಿ ತುರ್ತಾಗಿ NIC ಗೆ ಒದಗಿಸುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿರುತ್ತದೆ.

ಅದರನ್ವಯ HRMS ನಲ್ಲಿ ಲಭ್ಯವಿರುವಂತೆ ಸರ್ಕಾರಿ ಕಛೇರಿ / ಕಾಲೇಜುಗಳ ಸಿಬ್ಬಂದಿಗಳ ಮಾಹಿತಿಯನ್ನು ಕ್ರೋಢೀಕರಿಸಲಾಗಿರುತ್ತದೆ. NIC ಯಿಂದ ನೀಡಲಾಗಿರುವ ನಮೂನೆಯಲ್ಲಿ ಇನ್ನೂ ಹೆಚ್ಚಿನ ವಿವರಗಳನ್ನು ಕೋರಲಾಗಿರುವುದರಿಂದ ಸದರಿ ಮಾಹಿತಿಗಳನ್ನು EMIS ತಂತ್ರಾಂಶದಲ್ಲಿ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ. ಸದರಿ ಮಾಹಿತಿಗಳನ್ನು ಕಾಲೇಜುಗಳ EMIS ಲಾಗಿನ್ ನಲ್ಲಿ ನೀಡಲಾಗಿರುವ Teaching Election Data & Non-Teaching Election Data ಲಿಂಕ್‌ಗಳಲ್ಲಿ **ದಿನಾಂಕ: 21/01/2023** ರೊಳಗಾಗಿ ಭರ್ತಿ ಮಾಡಲು ಸೂಚಿಸಲಾಗಿದೆ.

**ಸೂಚನೆಗಳು:**

1. HRMS ತಂತ್ರಾಂಶದಲ್ಲಿ ಅಧಿಕಾರಿ / ಸಿಬ್ಬಂದಿಗಳ ವೈಯಕ್ತಿಕ ಮಾಹಿತಿಗಳಾದ Designation, Group, Gender, Payscale, Residential Address, Date of Birth, Father's Name, Spouse Name, Spouse working status ಇವುಗಳನ್ನು ಕಡ್ಡಾಯವಾಗಿ ತಕ್ಷಣವೇ ಅಪ್‌ಡೇಟ್ ಮಾಡತಕ್ಕದ್ದು. ಡಿ.ಡಿ.ಓ ಹಂತದಲ್ಲಿ ಅಪ್‌ಡೇಟ್ ಮಾಡಲಾಗದ ವಿವರಗಳನ್ನು ಹೆಚ್.ಓ.ಡಿ ಅಪ್ರೂವಲ್‌ಗಾಗಿ ಸಂಬಂಧಪಟ್ಟ ಅಧಿಕೃತ ದಾಖಲಾತಿಗಳೊಂದಿಗೆ HRMS ತಂತ್ರಾಂಶದಲ್ಲಿ ಕಳುಹಿಸತಕ್ಕದ್ದು.

2. ಸರ್ಕಾರಿ ಕಛೇರಿ / ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ವೇತನವನ್ನು ಪಾವತಿಸುತ್ತಿರುವ ಪ್ರತಿಯೊಬ್ಬ ಸಿಬ್ಬಂದಿಗಳ ಮಾಹಿತಿಗಳನ್ನು ಕಡ್ಡಾಯವಾಗಿ EMIS ಲಾಗಿನ್ ನಲ್ಲಿ ನೀಡಲಾಗಿರುವ ಲಿಂಕ್‌ನಲ್ಲಿ ಭರ್ತಿ ಮಾಡತಕ್ಕದ್ದು.

3. Voter ID ಅನುಸಾರವಾಗಿ ಸರಿಯಾದ ಮಾಹಿತಿಯನ್ನು ಸಲ್ಲಿಸುವಂತೆ ಸಿಬ್ಬಂದಿಗಳಿಗೆ ಸೂಚನೆ ನೀಡಿ, ಮಾಹಿತಿಗಳು ಸರಿಯಾಗಿರುವ ಕುರಿತು ಆಯಾ ಡಿ.ಡಿ.ಓ ಗಳು ಪರಿಶೀಲಿಸಿ ಖಚಿತಪಡಿಸಿಕೊಂಡು EMIS ಲಾಗಿನ್ ನಲ್ಲಿ ನೀಡಲಾಗಿರುವ ಫಾರ್ಮ್‌ನಲ್ಲಿ ಭರ್ತಿ ಮಾಡತಕ್ಕದ್ದು. Part Number, Assembly Constituency (AC) Code, Home Assembly segment code ಬಗ್ಗೆ ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ https://ceo.karnataka.gov.in/ ವೆಬ್‌ಸೈಟಿನಿಂದ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

4. ಅಧಿಕಾರಿ / ಸಿಬ್ಬಂದಿಗಳ ಒಪ್ಪಿಗೆಯ ಮೇರೆಗೆ ಮಾತ್ರ ಆಧಾರ್ ಸಂಖ್ಯೆಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡತಕ್ಕದ್ದು. ಆಧಾರ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯವಾಗಿರದೇ, ಅವರವರ ಆಯ್ಕೆಯಾಗಿರುತ್ತದೆ.

5. ಆದೇಶ ಸಂಖ್ಯೆ:ಡಿಸಿಇ/ಟಿ.ಆರ್.ಎನ್/01/ಟಿಡಿಜಿ/2022 ದಿನಾಂಕ: 31/12/2022 ರನ್ವಯ ವರ್ಗಾವಣೆಗೊಂಡಿರುವ ಅಧಿಕಾರಿ / ಸಿಬ್ಬಂದಿಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನಿಂದಲೇ ಕೋರಿರುವ ಮಾಹಿತಿಗಳನ್ನು ಅಪ್‌ಲೋಡ್ ಮಾಡತಕ್ಕದ್ದು.

ಎಲ್ಲಾ ಡಿ.ಡಿ.ಓ ಗಳು ನಿಗದಿತ ದಿನಾಂಕದೊಳಗಾಗಿ ಮಾಹಿತಿಗಳನ್ನು ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ಭರ್ತಿ ಮಾಡಿದ್ದಲ್ಲಿ ಅಥವಾ ಯಾವುದೇ ಅಧಿಕಾರಿ, ಸಿಬ್ಬಂದಿಗಳ ಮಾಹಿತಿಗಳನ್ನು ಭರ್ತಿ ಮಾಡದಿದ್ದಲ್ಲಿ / ಮಾಹಿತಿಗಳನ್ನು ನಿಗದಿತ ದಿನಾಂಕದೊಳಗೆ ನೀಡದಿದ್ದಲ್ಲಿ, ಸಂಬಂಧಿಸಿದ ಡಿ.ಡಿ.ಓ ಗಳನ್ನು ಜವಾಬ್ದಾರರನ್ನಾಗಿ ಪರಿಗಣಿಸಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಇದು ಚುನಾವಣಾ ಕರ್ತವ್ಯಕ್ಕೆ ಸಂಬಂಧಿಸಿರುವುದರಿಂದ ಯಾವುದೇ ರೀತಿಯ ಅನಗತ್ಯ ವಿಳಂಬಕ್ಕೆ ಹಾಗೂ ತಪ್ಪುಗಳಿಗೆ ಆಸ್ಪದ ನೀಡದೇ ಖುದ್ದಾಗಿ ಮೇಲ್ವಿಚಾರಣೆ ಮಾಡಿ ಮಾಹಿತಿಗಳನ್ನು ಸಲ್ಲಿಸತಕ್ಕದ್ದು.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:-

1. ಪ್ರಾದೇಶಿಕ ಜಂಟಿನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಗುಲ್ಬರ್ಗಾ – ಅಗತ್ಯ ಕ್ರಮಕ್ಕಾಗಿ
2. ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಸುತ್ತೋಲೆಯನ್ನು ಪ್ರಕಟಿಸಲು.
4. ಕಛೇರಿ ಪ್ರತಿ.